ಅಕ್ಷರ ದಾಸೋಹ

784 (1191) ಶ್ರೀ ಪಾಟೀಲ್ ವಿ.ಎಸ್. (ಯಲ್ಲಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸ್ತುತ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಾಲೆಗಳಿಗೆ ಇರುವ ಅಕ್ಷರ ದಾಸೋಹ ಅಡುಗೆ ಕೋಣೆಗಳ ಸಂಖ್ಯೆ ಎಷ್ಟು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಪ್ರಸ್ತುತ ರಾಜ್ಯದಲ್ಲಿ 39047 ಅಡುಗೆ ಕೋಣೆಗಳಿವೆ.

ಅನಧಿಕೃತ ಮದ್ಯ ಮಾರಾಟ ಕುರಿತು

787 (571) ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ) (ದೇವರ ಹಿಪ್ಪರಗಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಮದ್ಯ ಮಾರಾಟಕ್ಕೆ ಪರವಾನಗಿ ಪಡೆದಿರುವವರ ಸಂಖ್ಯೆ ಎಷ್ಟು;

ಆ) ಪರವಾನಗಿದಾರರ ಹೆಸರು, ವಿಳಾಸ ಗ್ರಾಮವಾರು ವಿವರ ನೀಡುವುದು;

ಇ) ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಅನಧಿಕೃತವಾಗಿ ಬಹಿರಂಗವಾಗಿ ಮಾರಾಟ ಮಾಡುತ್ತಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಅನಧಿಕೃತವಾಗಿ ಆಯಾ ಗ್ರಾಮಗಳಲ್ಲಿ ಮದ್ಯ ಮಾರಾಟ ಮಾಡುತ್ತಿರುವವರ ವಿರುದ್ಧ ಕೈಗೊಂಡ ಕ್ರಮವೇನು;

ಉ) ಕಳೆದ 2 ವರ್ಷಗಳಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವವರ ವಿರುದ್ಧ ಎಷ್ಟು ಕೇಸು ದಾಖಲಿಸಲಾಗಿವೆ?

ಶ್ರೀ ಎಂ.ಪಿ.ರೇಣುಕಾಚಾರ್ಯ (ಅಬಕಾರಿ ಸಚಿವರು) :

ಅ) ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಮದ್ಯ ಮಾರಾಟಕ್ಕೆ 05 ಜನರಿಗೆ ಸಿಎಲ್ –2 ಸನ್ನದು ಪರವಾನಗಿ ನೀಡಲಾಗಿರುತ್ತದೆ.

ಆ) ಸನ್ನದು ಮಂಜೂರಾಗಿರುವ ವ್ಯಕ್ತಿಗಳ ಹೆಸರು ಹಾಗೂ ವಿಳಾಸ ಈ ಕೆಳಕಂಡಂತಿರುತ್ತದೆ.

1. ದೇವೇಂದ್ರಪ್ಪ ಯಮನಪ್ಪ ಗುತ್ತೇದಾರ್, ಸಿಎಲ್–2 ಸನ್ನದುದಾರರು, ಟಿಎಂಸಿ ನಂ–759, ದೇವರಹಿಪ್ಪರಗಿ.
2. ಶ್ರೀಮತಿ. ಯಂಕಮ್ಮಾದೇವಿ, ದೇವೇಂದ್ರಪ್ಪಾ ಗುತ್ತೇದಾರ ಸಿಎಲ್–2 ಸನ್ನದುದಾರರು, ಸಿಟಿಎಸ್ ನಂ–704, ದೇವರಹಿಪ್ಪರಗಿ.
3. ಮಾನೋಜಿ ಜಂಪಣ್ಣಾ ತೊರಗಲ್ ಸಿಎಲ್–2 ಸನ್ನದುದಾರರು, ಆಸ್ತಿ ನಂ.32, ಪಂಚಾಯತ ವಾಣಿಜ್ಯ ಕಟ್ಟಡ ಸಂಕೀರ್ಣ ಅಂಗಡಿ ನಂ.32, ದೇವರಹಿಪ್ಪರಗಿ.
4. ರಾಮಕೃಷ್ಣ ಎಸ್. ಕಲಕೇರಿ, ಸಿಎಲ್–2 ಸನ್ನದುದಾರರು, ಆಸ್ತಿ ನಂ.1337, ಕಲಕೇರಿ ಗ್ರಾಮ.
5. ಪ್ರಕಾಶ ಮರಿಯಪ್ಪಾ ಕಟ್ಟೀಮನಿ ಸಿಎಲ್–2 ಸನ್ನದು ದಾರರು, ವಿಪಿಸಿ ನಂ.119, ಕಲಕೇರಿ ಗ್ರಾಮ

ಇ) ಬಂದಿದೆ.

ಈ) ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವ ದೇವರಹಿಪ್ಪರಗಿ ಗ್ರಾಮದಲ್ಲಿ 02 ಪ್ರಕರಣಗಳು ಮತ್ತು ಪಡಗಾನೂರ ಗ್ರಾಮದಲ್ಲಿ ಒಂದು ಪ್ರಕರಣವನ್ನು ದಾಖಲಿಸಿ, ಸದರಿ ಮೂರು ಪ್ರಕರಣಗಳಲ್ಲಿ 03 ಜನರನ್ನು ಬಂಧಿಸಿ, ಅಬಕಾರಿ ಕಾಯ್ದೆ ಮತ್ತು ನಿಯಮಗಳ ಅನುಸಾರ ಕ್ರಮ ತೆಗೆದು ಕೊಳ್ಳಲಾಗಿದೆ.

ಉ) ಕಳೆದ 02 ವರ್ಷಗಳಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಅನಧಿಕೃತ ಮದ್ಯಮಾರಾಟ ಮಾಡುತ್ತಿರುವವರ ವಿರುದ್ಧ 03 ಪ್ರಕರಣಗಳನ್ನು ದಾಖಲಿಸಲಾಗಿದೆ.

ಪ್ರಥಮ ದರ್ಜೆ ಕಾಲೇಜಿನಲ್ಲಿ ನೇಮಕಾತಿ

789 (1358) ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಹಲವು ವರ್ಷಗಳಿಂದ ಬೋಧಕ ಮತ್ತು